ತೆಗೆದುಕೊಳ್ಳುತ್ತೀರಿ? ಎಂಬ ಬಗ್ಗೆ ಮಾನ್ಯ ಮಂತ್ರಿಯವರು ಹೇಳಬೇಕು, ಮತ್ತೆ ಯಾವ ವರ್ಷದಲ್ಲಿ ಇದನ್ನು ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಬೇಕು.

ಡಾ॥ ಎ.ಬಿ.ಮಾಲಕರೆಡ್ಡಿ: ಮಾನ್ಯ ಅಧ್ಯಕ್ಷರೇ, ಹುಲಸೂರಿನಲ್ಲಿ ಮೊದಲು ಪ್ರಾಥಮಿಕ ಆರೋಗ್ಯ ಕೇಂದ್ರವಿತ್ತು. ಅದನ್ನು ಮೇಲ್ದರ್ಜೆಗೆ ಏರಿಸಬೇಕೆಂದರೆ ಸರ್ಕಾರದ ಒಪ್ಪಿಗೆ ಬೇಕಾಗುತ್ತದೆ. ಆದರೆ ಜಿಲ್ಲಾ ಪಂಚಾಯತ್‌ನವರು ಈ ಒಪ್ಪಿಗೆಯನ್ನು ಪಡೆಯದೇ ರೆಸಲ್ಯೂಷನ್ ಅನ್ನು ಪಾಸ್ ಮಾಡಿಕೊಂಡು ಅವರೇ ಇದನ್ನು ಮೇಲ್ದರ್ಜೆಗೆ ಏರಿಸಿ ಕಟ್ಟಡನ್ನು ಕಟ್ಟಿದ್ದಾರೆ. ಹುಲಸೂರು ಒಂದು ದೊಡ್ಡ ಹಳ್ಳಿ ಹಾಗೂ ಮತಕ್ಷೇತ್ರ ಕೂಡ ಆಗಿದೆ. ನಾನು ಇದನ್ನು ಪರಿಶೀಲನೆ ಮಾಡಬೇಕೆಂದು ಹೇಳಿ ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ನೋಡಿಕೊಂಡು ಬರಲು ಹೇಳಿದ್ದೆ, ಆ ಕಟ್ಟಡ ಸಂಪೂರ್ಣವಾಗಿ ದುಃಸ್ಥಿತಿಯಲ್ಲಿದೆ. ಇಂತಹ ಪರಿಸ್ಥಿತಿಯಲ್ಲಿ ಇದನ್ನು ಯಾರು ಕಟ್ಟಿದ್ದಾರೋ, ಅವರು ಕಂಟ್ರಾಕ್ಟರೋ, ಇಲಾಖೆಯವರೋ, ಲ್ಯಾಂಡ್ ಆರ್ಮಿಯವರಿಂದ ಕಟ್ಟಿಸಿದ್ದಾರೋ, ಅವರ ಮೂಲಕ ಇದನ್ನು ಸರಿಪಡಿಸಬೇಕಾಗುತ್ತದೆ. ಇದಾದ ಮೇಲೆ ಸರ್ಕಾರ ಇದನ್ನು ಸಹಾನುಭೂತಿಯಿಂದ ಪರಿಗಣಿಸಿ 30 ಹಾಸಿಗೆಯುಳ್ಳ ಆಸ್ಪತ್ರೆಯನ್ನಾಗಿ ಮಾಡಿ ಮೇಲ್ದರ್ಜೆಗೆ ಏರಿಸುತ್ತೇವೆ.

ಶ್ರೀ ರಾಜೇಂದ್ರ ವರ್ಮ: ಅವರಿಗೆ ಸಂಪೂರ್ಣವಾಗಿ ಮಾಹಿತಿ ಇದೆ, ಈಗ ದುರಸ್ತಿ ಮಾಡುವುದಕ್ಕೆ ಹೆಚ್ಚು ಸಮಯ ತೆಗೆದುಕೊಂಡರೆ, ಈಗ ಇರುವುದೂ ಸಹ ಬಿದ್ದು ಹೋಗುತ್ತದೆ, ಆದುದರಿಂದ ಮಾನ್ಯ ಸಚಿವರು ಏನಾದರೂ ಸೂಕ್ತ ಕ್ರಮ ತೆಗೆದುಕೊಂಡು ಈ ವರ್ಷದಲ್ಲೇ ಅದನ್ನು ವಶಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಎ.ಬಿ.ಮಾಲಕರೆಡ್ಡಿ: ತಾವೂ ಕೂಡ ಎಕ್ಸ್-ಅಫಿಷಿಯೋ ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದೀರಿ, ಅದನ್ನು ಅಲ್ಲಿ ಪ್ರಸ್ತಾಪ ಮಾಡಿಸಿ, ಜಿಲ್ಲಾ ಪಂಚಾಯತ್‌ವರಿಗೆ ಹೇಳಿ ರಿಪೇರಿ ಮಾಡಿಸಬೇಕು.

ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ವಿವಿಧ ವಿಷಯಗಳಲ್ಲಿ ಸಂಶೋಧನೆ ನಡೆಸುವುದು.

209(2032)

ಶ್ರೀ ಸಿ.ಚನ್ನಿಗಪ್ಪ(ಕೊರಟಗೆರೆ): ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ವಿಶ್ವವಿದ್ಯಾಲಯಗಳಲ್ಲಿ ಯಾವ ಯಾವ ವಿಷಯಗಳಿಗೆ ಸಂಶೋಧನೆ ಮಾಡಲು ಅವಕಾಶಗಳಿರುತ್ತವೆ?

ಆ) ಕುವೆಂಪು ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಮಾಡಲು ಮತ್ತು ಪ್ರಬಂಧ ಮಂಡಿಸಲು ಮಹಿಳಾ ಉಪನ್ಯಾಸಕರಿಗೆ ನಿರ್ಬಂಧ ಹೇರಿರುವುದು ನಿಜವೇ?

ಇ) ನಿರ್ಬಂಧ ಹೇರಿದಲ್ಲಿ ವಿಶ್ವವಿದ್ಯಾಲಯವು ಮಹಿಳೆಯರ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದವರ ವಿರುದ್ಧ ದೌರ್ಜನ್ಯ ನೀತಿ ಅನುಸರಿಸುತ್ತಿರುವುದರ ಬಗ್ಗೆ ಸರ್ಕಾರದ ಕ್ರಮವೇನು?

ಡಾ॥ ಜಿ.ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು):

ಅ) ವಿವರಗಳು 1ನೇ ಅನುಬಂಧದಲ್ಲಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಅನುಬಂಧ- I

ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ಮಾಡಲು ಅವಕಾಶವಿರುವ ವಿಷಯಗಳ ವಿವರ.

(1) ಮೈಸೂರು ವಿಶ್ವವಿದ್ಯಾಲಯ

ರಸಾಯನಶಾಸ್ತ್ರ, ಭೌತಶಾಸ್ತ್ರ, ಸಸ್ಯಶಾಸ್ತ್ರ, ಅನ್ವಯಿಕ ಸಸ್ಯಶಾಸ್ತ್ರ, ಗಣಿತಶಾಸ್ತ್ರ, ಜೀವರಸಾಯನಶಾಸ್ತ್ರ, ಜೈವಿಕ ತಂತ್ರಜ್ಞಾನ, ಅನು ವಿಜ್ಞಾನ, ಪಾಲಿಮರ್ ವಿಜ್ಞಾನ, ಸಕ್ಕರೆ ತಂತ್ರಜ್ಞಾನ, ಭೂವಿಜ್ಞಾನ, ಆಹಾರ ವಿಜ್ಞಾನ, ಆಹಾರ ವಿಜ್ಞಾನ ಮತ್ತು ಪೋಷಣೆ, ಫುಡ್ ಇಂಜಿನಿಯರಿಂಗ್, ವಾಕ್ ಮತ್ತು ಶ್ರವಣ, ಮನಃಶಾಸ್ತ್ರ, ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ, ಕಂಪ್ಯೂಟರ್ ವಿಜ್ಞಾನ, ಆಹಾರ ತಂತ್ರಜ್ಞಾನ, ಪ್ರಾಣಿಶಾಸ್ತ್ರ, ಪರಿಸರ ವಿಜ್ಞಾನ, ಸಂಖ್ಯಾಶಾಸ್ತ್ರ, ರೇಷ್ಮೆ ವಿಜ್ಞಾನ, ಇಂಗ್ಲೀಷ್, ಕನ್ನಡ, ಹಿಂದಿ ಉರ್ದು, ಭಾಷಾ ವಿಜ್ಞಾನ, ಜಾನಪದ, ಕ್ರೈಸ್ತ ಧರ್ಮ, ಜೈನಾಲಿಜಿ ಮತ್ತು ಪ್ರಾಕೃತ, ದಕ್ಷಿಣ ಭಾರತೀಯ ಅಧ್ಯಯನ, ಇತಿಹಾಸ, ಮದ್ಯಪ್ರಾಚ್ಯ ಅಧ್ಯಯನ, ಅರ್ಥಶಾಸ್ತ್ರ, ಸಹಕಾರ ತತ್ವಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜ ಶಾಸ್ತ್ರ, ಸಮಾಜಕಾರ್ಯ, ಸಮೂಹ ಸಂಪರ್ಕ ಮತ್ತು ಪತ್ರಿಕೋದ್ಯಮ, ಅಭಿವೃದ್ಧಿ ಅಧ್ಯಯನ, ಮಾನವಶಾಸ್ತ್ರ, ಭೂಗರ್ಭಶಾಸ್ತ್ರ, ವ್ಯವಸಾಯ ಮತ್ತು ಮಾರುಕಟ್ಟೆ ಆಡಳಿತ, ನಗರ ಮತ್ತು ಸ್ಥಳೀಯ ಯೋಜನೆ, ಸಂಸ್ಕೃತ ಲಲಿತಕಲೆ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ, ವಾಣಿಜ್ಯ, ಶಿಕ್ಷಣ, ದೈಹಿಕ ಶಿಕ್ಷಣ, ಆಡಳಿತ ವಿಜ್ಞಾನ, ಕಾನೂನು.

(2) ಕರ್ನಾಟಕ ವಿಶ್ವವಿದ್ಯಾಲಯ

ಕನ್ನಡ, ಇಂಗ್ಲೀಷ್, ಹಿಂದಿ, ಭಾಷಾಶಾಸ್ತ್ರ, ಜನಪದ ಸಾಹಿತ್ಯ, ಸಂಗೀತ, ಮರಾಠಿ, ಸಂಸ್ಕೃತ, ಜರ್ಮನ್, ರಶೀಯನ್, ಉರ್ದು, ಫ್ರೆಂಚ್, ಪ್ರಾಚೀನ ಭಾರತ ಇತಿಹಾಸ ಮತ್ತು ಎಫಗ್ರಫಿ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ, ಅರ್ಥಶಾಸ್ತ್ರ, ಮಾನವಶಾಸ್ತ್ರ, ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ, ರಾಜ್ಯಶಾಸ್ತ್ರ, ಮನಃಶಾಸ್ತ್ರ, ತತ್ವಶಾಸ್ತ್ರ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ಜೈನಶಾಸ್ತ್ರ, ಗಾಂಧಿ ಅಧ್ಯಯನ, ಸಮಾಜಶಾಸ್ತ್ರ, ಸಮಾಜಕಾರ್ಯ, ಅಪರಾಧಶಾಸ್ತ್ರ, ಕಾನೂನು, ವಾಣಿಜ್ಯಶಾಸ್ತ್ರ, ಬಿಸಿನೆಸ್ ಮ್ಯಾನೇಜ್‌ಮೆಂಟ್, ಶಿಕ್ಷಣಶಾಸ್ತ್ರ, ದೈಹಿಕ ಶಿಕ್ಷಣ ಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಭೂಗರ್ಭಶಾಸ್ತ್ರ, ಭೂಗೋಳಶಾಸ್ತ್ರ, ಕಡಲುಜೀವಶಾಸ್ತ್ರ, ರೇಷ್ಮೆ ಅಧ್ಯಯನ ಸಸ್ಯಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ಸಂಖ್ಯಾಶಾಸ್ತ್ರ, ಗಣಿತಶಾಸ್ತ್ರ.

(3) ಬೆಂಗಳೂರು ವಿಶ್ವವಿದ್ಯಾಲಯ

ಕನ್ನಡ, ಇಂಗ್ಲೀಷ್, ಹಿಂದಿ, ಚರಿತ್ರೆ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಮೈಕ್ರೋಬಯಾಲಜಿ, ರೇಷ್ಮೆ ವಿಜ್ಞಾನ, ಗಣಿತಶಾಸ್ತ್ರ, ಯಂತ್ರಜ್ಞಾನ, ಎಲೆಕ್ಟ್ರಿಕ್, ಎಲೆಕ್ಟ್ರಾನಿಕ್ಸ್ ಹಾಗೂ ಸಿವಿಲ್, ಸಂವಹನ ಶಿಕ್ಷಣ, ಕಾನೂನುಶಾಸ್ತ್ರ, ವಾಣಿಜ್ಯ ಶಾಸ್ತ್ರ.

(4) ಗುಲ್ಬರ್ಗಾ ವಿಶ್ವವಿದ್ಯಾಲಯ

ಅನ್ವಯಿಕ ವಿದ್ಯುದ್ವಿಜ್ಞಾನ, ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ಗಣಿತಶಾಸ್ತ್ರ, ಸಂಖ್ಯಾಶಾಸ್ತ್ರ, ಜೈವಿಕ ತಂತ್ರಜ್ಞಾನ, ಜೀವರಸಾಯನಶಾಸ್ತ್ರ, ಭೌತಶಾಸ್ತ್ರ, ಭೂವಿಜ್ಞಾನ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಇತಿಹಾಸ, ಸಮಾಜಕಾರ್ಯ, ಮನಃಶಾಸ್ತ್ರ, ಸಮಾಜಶಾಸ್ತ್ರ, ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ, ಕನ್ನಡ, ಹಿಂದಿ, ಇಂಗ್ಲೀಷ್, ಉರ್ದು, ಸಂಸ್ಕೃತ, ಮರಾಠಿ, ಕಾನೂನು, ಶಿಕ್ಷಣ, ವಾಣಿಜ್ಯ, ಮ್ಯಾನೇಜ್‌ಮೆಂಟ್.

(5) ಮಂಗಳೂರು ವಿಶ್ವವಿದ್ಯಾಲಯ

ಕನ್ನಡ, ಅನ್ವಯಿಕ ಸಸ್ಯಶಾಸ್ತ್ರ, ಇಂಗ್ಲೀಷ್, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಅನ್ವಯಿಕ ಪ್ರಾಣಿಶಾಸ್ತ್ರ, ರಾಜಕೀಯ ಶಾಸ್ತ್ರ, ವಾಣಿಜ್ಯಶಾಸ್ತ್ರ, ಸಾಗರ ಭೂಗರ್ಭಶಾಸ್ತ್ರ, ಭೂಗೋಳ, ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮ, ಕ್ರೀಡೆ ಮತ್ತು ದೈಹಿಕ ಶಿಕ್ಷಣ, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಸಂಖ್ಯಾಶಾಸ್ತ್ರ, ಜೀವವಿಜ್ಞಾನ, ವಸ್ತುವಿಜ್ಞಾನ, ಮಾಹಿತಿ ಮತ್ತು ಗ್ರಂಥಾಲಯ ವಿಜ್ಞಾನ, ವ್ಯವಹಾರ ಮತ್ತು ಆಡಳಿತ, ಸೂಕ್ಷ್ಮ ಜೀವಶಾಸ್ತ್ರ, ಸಂಸ್ಕೃತ, ಇತಿಹಾಸ.

(6) ಕುವೆಂಪು ವಿಶ್ವವಿದ್ಯಾಲಯ

ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ಸಂಸ್ಕೃತ, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಅನ್ವಯಿಕ ಭೂಗರ್ಭಶಾಸ್ತ್ರ, ರಸಾಯನಶಾಸ್ತ್ರ, ಕೈಗಾರಿಕಾ ರಸಾಯನಶಾಸ್ತ್ರ, ಬಯೋ ಟೆಕ್ನಾಲಜಿ, ಜೀವ ರಸಾಯನಶಾಸ್ತ್ರ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, ಗಣಿತಶಾಸ್ತ್ರ, ಸೂಕ್ಷ್ಮಾನು ಜೀವಶಾಸ್ತ್ರ, ಭೌತಶಾಸ್ತ್ರ, ಶಿಕ್ಷಣ ಶಾಸ್ತ್ರ, ಇಂಜಿನಿಯರಿಂಗ್ ವಿಷಯಗಳು, ಕಾನೂನು, ವಾಣಿಜ್ಯಶಾಸ್ತ್ರ, ಆಡಳಿತ ನಿರ್ವಹಣಾ ಶಾಸ್ತ್ರ.

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿನ ವಿಶ್ವವಿದ್ಯಾಲಯಗಳಲ್ಲಿನ ಲೆಕ್ಚರರ್ಸ್ ಅನ್ನು ಅಂತರಾಷ್ಟ್ರೀಯ ಸಮ್ಮೇಳನಕ್ಕೆ ಕಳುಹಿಸುವ ಯೋಜನೆ

ವಿಶ್ವವಿದ್ಯಾಲಯಗಳಲ್ಲಿ ಇದೆಯೆ ಎಂದು ಸರ್ಕಾರಕ್ಕೆ ಕೇಳಬಯಸುತ್ತೇನೆ.

ಡಾ॥ ಜಿ.ಪರಮೇಶ್ವರ: ಮಾನ್ಯ ಅಧ್ಯಕ್ಷರೆ, ವಿಶ್ವವಿದ್ಯಾಲಯಗಳಲ್ಲಿ, ಕಾಲೇಜುಗಳಲ್ಲಿ ಕ್ವಾಲಿಟಿ ಇಂಪ್ರೂವ್‌ಮೆಂಟ್ ಪ್ರೋಗ್ರಾಂ ಎನ್ನುವ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಅದರಲ್ಲಿ ಸೀನಿಯಾರಿಟಿ ಮೇಲೆ, ಅವರ ಸಬ್ಜೆಕ್ಟ್ ಮೇಲೆ, ಯಾವುದರ ಮೇಲೆ ಪಿಹೆಚ್‌ಡಿ ಮಾಡುತ್ತಿದ್ದಾರೆಂಬುದನ್ನು ನೋಡಿಕೊಂಡು ಡೆಪ್ಯುಟೇಷನ್ ಮೇಲೆ ಕಳುಹಿಸಿಕೊಡುತ್ತಾರೆ. ಕುವೆಂಪು ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಸುಮಾರು 25ಕ್ಕೂ ಹೆಚ್ಚು ಬೇರೆ ಬೇರೆ ವಿಷಯಗಳಲ್ಲಿ ಸಂಶೋಧನೆ ಮಾಡುವುದಕ್ಕೆ ಅವಕಾಶವಿದೆ, ಅಲ್ಲೂ ಕೂಡ ಅವರನ್ನು ಕಳುಹಿಸಿದ್ದಾರೆ.

ಶ್ರೀ ಸಿ.ಚೆನ್ನಿಗಪ್ಪ: ಡಾ॥ ಅನುರಾಧ ಪಾಟೀಲ್ ಹಾಗೂ ಡಾ॥ ಇಯಾಜ್ ಅಹಮದ್‌ರವರನ್ನು ಕಳುಹಿಸಲು ವಿಶ್ವವಿದ್ಯಾಲಯ ಅನುಮತಿ ಕೊಟ್ಟು ಒಂದೆ ಕೊಟ್ಟು ರಜೆಯನ್ನೂ ಕೂಡ ಮಂಜೂರು ಮಾಡಿತ್ತು. ಆದರೆ ಕೊನೆಯಲ್ಲಿ ಅವರಿಗೆ ಒಂದೆಯನ್ನು ಕೊಡಲಿಲ್ಲ. ರಜೆಯನ್ನು ಮಂಜೂರಾತಿ ಕೊಡಲಿಲ್ಲ. ಅವರಿಗೆ ಅನುಮತಿ ಕೊಟ್ಟಿದ್ದರೂ ನೀವು ಹೋಗಬಾರದೆಂದು ಮತ್ತೆ ನಿರ್ಬಂಧ ಹಾಕಿದರು. ಮತ್ತೆ ಯಾವುದೇ ವಿಶ್ವ ವಿದ್ಯಾಲಯಗಳಲ್ಲಿ ಪಿಹೆಚ್‌ಡಿಗೆ ಎಸ್.ಸಿ:ಎಸ್‌ಟಿ ಜನಾಂಗದ ಪ್ರೊಫೆಸರ್ಸ್ ಅನ್ನು ಕಳುಹಿಸಿಲ್ಲ, ಇದಕ್ಕೆ ಕಾರಣವೇನು?

ಡಾ॥ ಜಿ.ಪರಮೇಶ್ವರ್: ಎಸ್‌ಸಿ:ಎಸ್‌ಟಿ ಜನಾಂಗದವರಿಗೆ ಅನುಮತಿ ಕೊಡುತ್ತಿಲ್ಲ, ದೌರ್ಜನ್ಯದ ನೀತಿಯನ್ನು ಅನುಸರಿಸುತ್ತಿದ್ದಾರೆಂದು ತಾವು ಕೇಳಿದ್ದೀರಿ. ಕುವೆಂಪು ವಿಶ್ವವಿದ್ಯಾಲಯದಲ್ಲಿ ಆ ರೀತಿಯ ವಿಷಯ ಯಾವುದೇ ರೀತಿಯಲ್ಲಿ ಇದುವರೆಗೆ ನಮ್ಮ ಗಮನಕ್ಕೆ ಬಂದಿಲ್ಲ, ಕಳೆದ 1-1-2000ರಿಂದ 133 ಜನರೆನ್ನು ಪಿಹೆಚ್‌ಡಿಗೆ ಡೆಪ್ಯುಟೇಷನ್ ಮಾಡಿದ್ದಾರೆ. ಅದರಲ್ಲಿ 23 ಜನ ಹೆಣ್ಣು ಮಕ್ಕಳಿಗೆ ಕೊಟ್ಟಿದ್ದಾರೆ, ಅದರಲ್ಲಿ 16 ಎಸ್‌ಸಿ ಹಾಗೂ 8 ಎಸ್‌ಟಿ ಜನಾಂಗದವರಿಗೆ ಕೊಟ್ಟಿದ್ದಾರೆ. ಅಲ್ಲಿ ಎಸ್‌ಸಿ:ಎಸ್‌ಟಿಗಳ ಬಗ್ಗೆ ದೌರ್ಜನ್ಯ ನಡೆಯುತ್ತಿದೆ ಎಂದು ಹೇಳುವುದು ಸರಿಯಾದುದಲ್ಲ.

ಶ್ರೀ ಸಿ.ಚೆನ್ನಿಗಪ್ಪ: ನನಗೆ ಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ ಎಸ್‌ಸಿ:ಎಸ್‌ಟಿ ಜನಾಂಗ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ ನೀತಿ ಅನುಸರಿಸುತ್ತಿರುವ ಬಗ್ಗೆ ಮಾಹಿತಿಯನ್ನು ಕೊಟ್ಟಿಲ್ಲ. ನಾನು ಹೇಳುವುದೇನೆಂದರೆ, ಇನ್ನು ಮುಂದಾದರೂ ಎಸ್‌ಸಿ:ಎಸ್‌ಟಿ ಹಾಗೂ ಮಹಿಳೆಯರಿಗೆ ಪಿಹೆಚ್‌ಡಿ ಮಾಡಲು ಹೆಚ್ಚು ಅವಕಾಶ ಕಲ್ಪಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಈ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಡಾ: ಜಿ.ಪರಮೇಶ್ವರ: ಆಗಬಹುದು.